PW-1 : ಬೊಮ್ಮಲಿಂಗಪ್ಪ

ದಿನಾಂಕಃ **23.07.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಎಂ ಎನ್ ವಕೀಲರಿಂದಃ**

ನನ್ನ ತಂದೆಗೆ ನಾನು 1 ನೇ ಮಗ. ನಮ್ಮ ತಂದೆಗೆ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ನನ್ನ ತಾತನಿಗೆ 3 ಜನ ಮಕ್ಕಳು. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಸ್ವತ್ತುಗಳಿವೆ ಎಂದರೆ ಸರಿ. ಸರ್ವೆ ನಂಃ 18 ರಲ್ಲಿ 12 ವರೆ ಎಕರೆ ಇದೆ. ನಮಗೆ ಸರ್ವೆ ನಂಃ 24 ಇಲ್ಲ. ಸರ್ವೆ ನಂಃ 18 ಮತ್ತು 24 ನಮ ತಾತನಿಂದ ಬಂದಿರುತ್ತವೆ ಎಂದರೆ ಸರಿಯಲ್ಲ. ನಮ್ಮ ತಾತ ಮತ್ತು ಸಹೋದರ ಬೇರೆ ಹೋದಾಗ ಸರ್ವೆ ನಂಃ 18 ಸ್ವತ್ತು ನಮ್ಮ ತಾತನಿಗೆ ಬಂದಿರುತ್ತದೆ. ನಮ್ಮ ತಾತನ ತಂದೆ ದೊಡ್ಡಈರಪ್ಪ. ಅವರಿಗೆ ಎಷ್ಟು ಜಮೀನುಗಳು ಇದ್ದವು ಗೊತ್ತಿಲ್ಲ. ಸರ್ವೆ ನಂಃ 18 ನಮ್ಮ ತಾತ ತಂದೆ ದೊಡ್ಡಈರಪ್ಪನಿಗೆ ಸೇರಿದ್ದು ಎಂದರೆ ಸರಿಯಲ್ಲ. ಆ ಸ್ವತ್ತು ನನ್ನ ತಾತಾನ ತಂದೆ ದೊಡ್ಡಈರಪ್ಪನಿಗೆ ಸೇರಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಃ 24 ಸಹ ದೊಡ್ಡಈರಪ್ಪನಿಂದ ಬಂದಿದೆ ಎಂದರೆ ಸರಿಯಲ್ಲ. ವಿಲ್ ಅನ್ನು ದಿಃ 25.02.2015 ರಂದು ಬರೆಯಲಾಗಿದೆ. ಸದರಿ ವಿಲ್ ನನಗೆ ಸಿಕ್ಕಿರುತ್ತದೆ.

2. ನನ್ನ ತಾತ ಡಿಸೆಂಬರ್ 2021 ರಲ್ಲಿ ಮೃತಪಟ್ಟಿರುತ್ತೇನೆ. ದಿನಾಂಕ ಹೇಳಲಾಗುವುದಿಲ್ಲ. ವಿಲ್ ಅನ್ನು ತೆಗೆದುಕೊಂಡು ಕಾರ್ಯದರ್ಶಿ ಬಳಿ ಹೋಗಿಖಾತೆ ಮಾಡುವಂತೆ ಕೇಳಿರುತ್ತೇನೆ. ವಿಲ್ ನ ಮೇಲೆ ಖಾತೆ ಮಾಡಲು ನಮಗೆ ಅಧಿಕಾರ ಇಲ್ಲ ಎಂದು ಹೇಳಿರುತ್ತಾರೆ. ನಂತರ ನಮ್ಮ ವಕೀಲರ ಹೋಗಿ ದಾವೆ ದಾಖಲಿಸಿರುತ್ತೇನೆ. ವಿಲ್ ಅನ್ನು ನಮ್ಮ ತಾತ ಬರೆದಿರುವ ಬಗ್ಗೆ ಊರಿನಲ್ಲಿ ಯಾರನ್ನು ವಿಚಾರಣೆ ಮಾಡಿಲ್ಲ. ವಿಲ್‌ನ್ನು ಬರೆದಿರುವ ಬಗ್ಗೆ ಜಯಪಾಲರಾವ ಹೇಳಿರುತ್ತಾರೆ. ಬೇರೆ ಯಾರನ್ನು ನಾನು ಕೇಳಿರುವುದಿಲ್ಲ. ವಿಲ್ ಅನ್ನು ರೂ.2 ಛಾಪಾಕಾಗದದಲ್ಲಿ ಬರೆಯಲಾಗಿದೆ. ಛಾಪಾಕಾಗದ

ಜಯಪಾಲರಾವ ಅವರಿಗೆ ಯಾರು ನೀಡಿರುತ್ತಾರೆ ನನಗೆ ಗೊತ್ತಿಲ್ಲ. ವಿಲ್ ಅನ್ನು ಯಾವ ರೀತಿ ಬರೆಯಲಾಗಿದೆ ನನಗೆ ಗೊತ್ತಿಲ್ಲ.

3. ವಿಲ್ ನಲ್ಲಿ ಬರೆದಿರುವ ಸ್ವತ್ತುಗಳು ನನ್ನ ತಾತ ಅವಲಪ್ಪ ಖರೀದಿಸಿದ ಸ್ವತ್ತುಗಳಾಗಿವೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು ಕುರಿ ಮಾರಾಟ ಮಾಡಿ 1966 ನೇ ಇಸ್ವೀಯಲ್ಲಿ ಖರೀದಿಸಿರುತ್ತಾರೆ. ನನ್ನ ತಾತ ಕುರಿಗಳನ್ನು ಇಟ್ಟುಕೊಂಡಿದ್ದರು ಎಂದರೆ ಸರಿ. ಆ ಜಮೀನುಗಳ ವರಮಾನ ಮತು ಕುರಿಯ ಆದಾಯದಿಂದ ಸ್ವತ್ತುಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ನನ್ನ ತಾತ ಸ್ವಯಾರ್ಜಿತವಲ್ಲ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳಿದ ಬಂದ ವರಮಾನದಿಂದ ಸ್ವತ್ತುಗಳನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ. ನನಗೆ 45 ವರ್ಷ. ನನ್ನ ತಂದೆ 2010 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಸಾಯುವ ಕಾಲಕ್ಕೆ ಅವರಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಗೊತ್ತಿಲ್ಲ. ನನ್ನ ತಾತ ಅವಲಪ್ಪ ಮೃತಪಟ್ಟಾಗ ಅವರಿಗೆ 75 ವರ್ಷ ವಯಸ್ಸಾಗಿತ್ತು. ನನ್ನ ತಂದೆ ಮೃತಪಟ್ಟಾಗ ನನ್ನ ತಂದೆಗೆ 60 ವರ್ಷ ವಯಸ್ಸಾಗಿತ್ತು.

4. ನನ್ನ ತಾತ ಮೃತಪಟ್ಟಾಗ 90 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಅವರಿಗೆ ಅರಳು ಮರಳು ಎಂದರೆ ಸರಿಯಲ್ಲ. ಅವರ ಯೋಚನೆ ಮಾಡುವ ಶಕ್ತಿ ಕಳೆದುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ ಮಕ್ಕಳಿಗೆ ಮೋಸ ಮಾಡುವ ಉದ್ದೇಶಂದ ನಾನೇ ವಿಲ್ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತ ಎಂದು ವಿಲ್ ಅನ್ನು ಬರೆದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.